His Excellency appears to say that it was a great temptation for His Excellency and other Members of the Delegation after hearing our Speaker of the Lok Sabha to make it a point to visit Bangalore City. So, they have fulfilled their promise of visiting Bangalore City and they have been very much pleased to see the Vidhana Soudha and the rest of the City. We are once again thankful to the Delegation who have taken pains to visit our State and to visit this House as well and I join with you in extending a hearty welcome to them and I also wish them, though their stay to the City is very short, a fine stay. I again wish to request His Excellency and the Ambassador from Korea to India to see that more and more such delegations come from South Korea to our State with a view to build up and foster more lasting friendship between these two great countries. Thank you.

S.R. BOMMAI.—Mr. Speaker Sir, it gives me immense pleasure to join you and the Hon'ble Chief Minister inwelcoming the parliamentary delegation of the Republic of Korea. During the last one year, we have been seeing a number of delegations coming from different foreign countries and our relations with foreign countries have improved, strengthened and more and more co-operation is extended.

Sir, I heartily welcome the delegation. I had the pleasure of dining with them yesterday at Raj Bhavan and I had the opportunity to meet, discuss and exchange views with them. Theirs is also a democratic country. There, Sir, the speaker is on a higher pedestal than the Prime Minister of that country, a peculiarity of their parliamentary system. In their delegation, a number of journalists who knows world affairs very well and who have studied well about India have come. Once they were known as a silk growing country and now they have stopped that and taken to industrialisation and they have got a great desire and intention to have more and more communication between our two countries. We too desire to have more and more closer relations with them. I join with the Hon'ble Chief Minister in extending a friendly welcome to His Excellency and the delegation. I request them to carry with them the good-will of Indian people to the people of South Korea. Thank you very much.

Supplementary Demands for grants for 1977-78
General Discussion (Debate Contd.)

MR. SPEAKER.—Sri M.C. Basappa may continue his speech.

SRI M.C. BASAPPA.—I was just explaining that the Finance Minister has defeated the very object of supplementary estimates by coming before this House for such a huge sum of Rs. 208 Crores. The other point which I wanted to make out was that the amounts

sanctioned in the budget prepared for the year 1977-78 was not properly utilised and thereby they are now seeking the permission of the House for the expenditure incurred without the prior approval of this House and that amount comes to Rs. 131.27 Crores. That means such a huge amount without the prior approval of this House has been spent and now they are coming before this House for ratification. This is not a correct thing. I would like to point out one or two expenditures which could have been waited for some time.

In Demand No. 17, mention has been made about purchase of 399 flats costing Rs. 1,65,80,750. I want to know, was it not possible to wait till the annual budget is presented to this House, If it was indicated in the annual budget, it would have enabled the hon. Members to discuss and express their opinion as to whether the purchase of flats is necessary or not or to construct some other alternative buildings. But you have not given us an opportunity to express our views on this issue. The amount is there not utillised for the purpose for which it was sanctioned. Now you want to purchase some building and transfer the amount and take the approval of the House, which is not correct.

Then I would like to speak on Demand No. 13-Police and Fire Services. You have come before this House for the grant of Rs. 6.68 lakhs for the construction of a Fire Station in Sandur. You have stated that due to industrial progress in and around Sandur, this Fire Station was felt necessary. Is it a magic ? The industrial development has come within a month or two months? The industrial growth is there. That means, you have not properly planned. All of a sudden, on one fine morning, you have taken a decision to construct a Fire Station at Sandur. Now you have come up before this House for the sanction of Rs. 6.68 lakhs The programme of work approved by this House is not adhered to in some cases. You want to take up the works which the Government wants and not the works approved by the House. This is not a correct procedure because it means that this House cannot have any control whatso er on the spending of the amounts by the Government. Therefore, I submit that these supplementary demands does not deserve to be sanctioned by this House and I oppose these supplementary demands.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ, ೨೦೮ ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮಾನ್ಯ ಅರ್ಥ ಮಂತ್ರಿಗಳು ನಮ್ಮ ಮುಂದಿಟ್ಟಿದ್ದಾರೆ. ಇದಾದರೂ ಇಷ್ಟೆ. ನಾವು ಜನತೆಗೆ ಏನೊಂದು ವಚನವನ್ನು ಕೊಟ್ಟಿದ್ದೇವೆಯೋ ಅದರಂತೆ ಸಮಾಜವಾದದ ಒಂದು ಪರಿಸ್ಥಿತಿಯನ್ನು ಈ ರಾಷ್ಟ್ರದಲ್ಲಿ ಮೂಡಿಸಬೇಕು. ಈ ರಾಜ್ಯದಲ್ಲಿ ಮೂಡಿಸಬೇಕು ಎಂದು ಹೇಳಿ ಈ ೨೦೮ ಕೋಟಿ ರೂಪಾಯಿಗಳ ಬೇಡಿಕೆಗೆ ಒಪ್ಪಿಗೆಯನ್ನು ಕೊಡಬೇಕೆಂದು ನಮ್ಮ ಮಾನ್ಯ ಅರ್ಥ ಸಚಿವರು ಹೇಳುತ್ತಿದ್ದಾರ. ಈ ೨೦೮ ಕೋಟಿ ರೂಪಾಯಿಗಳನ್ನು ಈ ರಾಜ್ಯದ ಸಾಮಾನ್ಯವಾದ ಜನತೆಗೆ ವಸತಿ ನಿರ್ಮಾಣದ ಕಾರ್ಯದಲ್ಲಿ ನಾವು ಉಪಯೋಗಿಸಿದ್ದೇವೆ. ಹಿಂದುಳಿದ ವರ್ಗದವರಿಗೆ,

ಕಡುಬಡತನದಲ್ಲಿ ಹಾಗೂ ಅಸಹಾಯಕ ಸ್ಥಿತಿಯಲ್ಲಿರತಕ್ಕಂಥ ಮಕ್ಕಳಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವ ದಿಕ್ಕಿನಲ್ಲಿ ನಾವು ಇದನ್ನು ಉಪಯೋಗಿಸಿದ್ದೇವೆ. ಜೊತೆಗೆ ಜನತಾ ವಸತಿ ಯೋಜನೆಯ ಒಂದು ಕಾರ್ಯಕ್ರಮದಲ್ಲಿ ೩ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಒಂದನೆಯದು. ೧೨೫೦ ರೂಪಾಯಿಗಳನ್ನು ಕೊಡುವುದು. ಮತ್ತು ೨೫೦ ರೂಪಾಯಿಗಳನ್ನು ಗುಡಿಸಲಿನ ನಿರ್ಮಾಣ ಕಾರ್ಯದಲ್ಲಿ ಉಪಯೋಗಿಸಿದ್ದೇವೆ. ನನ್ನ ಸನ್ಮಾನ್ಯ ಮಿತ್ರರೂ ಹಾಗೂ ವಿರೋಧ ಪಕ್ಷದ ನಾಯಕರೂ ಹೇಳಿದರು. ಬಾಂಗ್ಲಾ ದೇಶದಲ್ಲಿ ಯುದ್ಧ ನಡೆಯುತ್ತಿದ್ದಾಗ ತೆರಿಗೆ ಯನ್ನು ಈ ರಾಜ್ಯದ ಜನತೆಯ ಮೇಲೆ 'ಹೇರಿದ್ದೀರಿ ಎಂದು. ಆ ಬಾಂಗ್ಲಾ ದೇಶದ ಯುದ್ಧ ನಿಂತ ಮೇಲೆ ಈ ತೆರಿಗೆಯನ್ನು ರಾಜ್ಯದ ಬಡ ಜನತೆಗೆ ಗೃಹ ನಿರ್ಮಾಣ ಮಾಡಿ ಅವರಿಗೆ ಒಂದು ರಕ್ಷಣೆಯನ್ನು ಒದಗಿಸಿಕೊಡಬೇಕೆನ್ನತಕ್ಕಂಥ ಯೋಜನೆಯನ್ನು ಹಾಕಿಕೊಂಡು ಅದರಲ್ಲಿ ಹಣವನ್ನು ಉಪಯೋಗಿಸಿದ್ದೇವೆ. ಇದು ಸರಿಯಾಗಿ ವಿನಿಯೋಗವಾಗಬೇಕು. ಮತ್ತು ಹಣ ಉಚಿತವಾಗಿ ಉಪಯೋಗ ವಾಗಬೇಕು ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಸ್ತುತ್ಯರ್ಹವಾದ ಮಾತು.

ಹಣ ಎಲ್ಲಿ ಹೋಗಿದೆಯೋ, ಯಾರು ಮಧ್ಯವರ್ತಿಗಳು ಅಥವಾ ದಳ್ಳಾಳಿಗಳು ಹೊಡೆದಿದ್ದಾರೋ ಎನ್ನುವ ಅರ್ಥ ಬರುವ ಹಾಗೆ ಅವರು ಅದೇ ಕಾಲದಲ್ಲಿ ಹೇಳಿದ್ದಾರೆ. ಜನತೆಗೆ ಉಪಯೋಗವಾಗ ಬೇಕು ಮತ್ತು ಅದರಿಂದ ಅವರ ಕಲ್ಯಾಣವಾಗಬೇಕೆನ್ನುವ ದಿಕ್ಕಿನಲ್ಲಿ ಮಾಡಿರುವ ಯೋಜನೆಗಳಿಗೆ ಮಧ್ಯವರ್ತಿಗಳೇನಾದರೂ ಕುತಂತ್ರವನ್ನು ಹೂಡಿದ್ದರೆ, ಈ ಬಗ್ಗೆ ಪ್ರತಿಯೊಂದು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಿರ್ಮಾಣವಾಗಿರುವ ಮನೆಗಳಲ್ಲಿ ಎಷ್ಟು ಮನೆಗಳು ಸಲ್ಲಬೇಕಾಗಿರುವವರಿಗೆ ಸಂದಿವೆ ಮತ್ತು ಎಷ್ಟು ಸಂದಿಲ್ಲ ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕು. ತನ್ಮೂಲಕ ದುರುಪಯೋಗದ ಅನುಮಾನಕ್ಕೆ ಆಸ್ಪದ ಕೊಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ವಿದ್ಯಾರ್ಥಿಗಳ ವಿಚಾರದಲ್ಲಿ ಜಾತಿ ಮುಂತಾದ ಕಟ್ಟಿಕೋಟಲೆಗಳಿಲ್ಲ. ಬಡ ವಿದ್ಯಾರ್ಥಿಗಳು—ಅವರು ಯಾವ ಜಾತಿಗೇ ಸೇರಿರಲಿ, ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಐವತ್ತು ರೂಪಾಯಿಗಳನ್ನೂ, ಪ್ರೌಢ ಶಾಲಾ ಮಟ್ಟದಲ್ಲಿ ಎಪ್ಪತ್ತು ರೂಪಾಯಿಗಳನ್ನೂ ಮತ್ತು ಕಾಲೇಜು ಮಟ್ಟದಲ್ಲಿ ೫೦೦ ರೂಪಾಯಿಗಳನ್ನೂ ಕೊಡಬೇಕೆಂದು ಯೋಜನೆ ಹಾಕಿಕೊಂಡು, ಅದನ್ನು ನಮ್ಮ ಸರ್ಕಾರ ವಿದ್ಯಾರ್ಥಿ ಗಳಿಗೆ ಹಂಚಿದೆ. ಇದರಲ್ಲಿ ರಾಜಕೀಯದ ಕಾವಿಲ್ಲ. ಈ ಹಣವು ಸದ್ವಿನಿಯೋಗವಾಗಿದೆಯೇ ಎಂದು ಮಾನ್ಯ ಬಸಪ್ಪನವರು ಕೇಳಿದರು ಮತ್ತು ಇನ್ನೊಬ್ಬ ಸ್ನೇಹಿತ ಸದಸ್ಯರು ಚುನಾವಣೆ ಕಾಲದಲ್ಲಿ ಆಡಳಿತ ಪಕ್ಷದವರು ಹೂಡಿದ ಆಟ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ಇದು ವಿಷಾದದ ಸಂಗತಿ. ಚುನಾವಣೆಗೆ ಮುನ್ನ ನಮ್ಮನ್ನು ಮುಗಿಸಬೇಕೆನ್ನುವ ಉದ್ದೇಶದಿಂದ ನಮ್ಮ ಸರ್ಕಾರವನ್ನು ವಜಾ ಮಾಡಿದರು. ನಮ್ಮ ಹಿಂದಿನ ಸರ್ಕಾರ ಅನೇಕ ಸಂಸ್ಥೆಗಳಿಗೆ ನೇಮಿಸಿದ್ದ ಅಧ್ಯಕ್ಷರುಗಳನ್ನು ಮನೆಗೆ ಕಳುಹಿಸಿದರು. ಇಷ್ಟೆಲ್ಲಾ ಮಾಡಿದ್ದರೂ ಸಹ ನಮ್ಮ ಸರ್ಕಾರದ ಪ್ರಗತಿಪರ ನೀತಿಯಲ್ಲಿ ನಂಬಿಕೆಯಿಟ್ಟು ನಮ್ಮನ್ನು ಆಶೀರ್ವದಿಸಿ ಪುನಃ ಈ ಸಭೆಗೆ ಕಳುಹಿಸಿದ್ದಾರೆ. ಆದುದ ರಿಂದ, ನೀವು ನಿಮ್ಮ ಸ್ಥಾನಗಳನ್ನು ಬಲಪಡಿಸಿಕೊಳ್ಳಬೇಕಾದರೆ ನಮ್ಮ ಪ್ರಗತಿಪರ ಕಾರ್ಯದಲ್ಲಿ ಸಹಕರಿಸಬೇಕು. ಆಗ ಮಾತ್ರ ನೀವೆಲ್ಲಾ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯ ನಾವೆಲ್ಲಾ ಅಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯ. ಅದು ಬಿಟ್ಟು, ಈಗ ಅನುಸರಿಸುತ್ತಿರುವ ಕಾರ್ಯತಂತ್ರವನ್ನೇ ಮುಂದುವರಿಸಿಕೊಂಡು ಹೋಗುವುದಾದರೆ ಇನ್ನೂ ಹತ್ತು ವರ್ಷವಾದರೂ ನೀವು ಅಲ್ಲೇ ನಾವು ಇಲ್ಲೇ.

ಮಾನ್ಯ ಅರ್ಥ ಮಂತ್ರಿಗಳು ಕೇಳಿರುವ ೨೦೮ ಕೋಟಿ ರೂಪಾಯಿಗಳ ಬೇಡಿಕೆಗೆ ಒಪ್ಪಿಗೆಯನ್ನು ಕೊಟ್ಟು, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ೨೦೮.೭೯ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡ್‌ನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. ಸಾಧಾರಣವಾಗಿ, ಆಯವ್ಯಯ ಪತ್ರವನ್ನು ಮಂಡಿಸುವಾಗ ಒಂದು ವರ್ಷದ ನೈಜಪರಿಸ್ಥಿತಿಯನ್ನು ಕೊಡಬೇಕಾಗುತ್ತದೆ. ಸಪ್ಲಿಮೆಂಟರಿ ಡಿಮ್ಯಾಂಡ್ ತರಬೇಕಾದರೆ ಅಲ್ಪಸ್ವಲ್ಪ ವ್ಯತ್ಯಾಸವಾಗಬೇಕೇ ವಿನಹ ಸಂಪೂರ್ಣವಾಗಿ ಅಥವಾ ಹೆಚ್ಚು ಮಾರ್ಪಾಡು ಆಗ್ಬ

ರೀತಿಯಲ್ಲಿ ತರತಕ್ಕದ್ದು ಸಮರ್ಪಕವಲ್ಲ; ಮತ್ತು ಆಯವ್ಯಯ ಸೂತ್ರಕ್ಕೂ ಹೊಂದಿಕೆಯಾಗುವುದಿಲ್ಲ. ಸುಮಾರು ೨೦೮ ಕೋಟಿ ರೂಪಾಯಿಗಳನ್ನು ಏನು ಅಪ್ರೂವ್ ಮಾಡಬೇಕೆಂದು ಕೇಳಿದ್ದಾರೆ, ಅದು ಸರಿಯಾದ ಯೋಜನೆಯಿಂದ ಮಾಡಿದ ಆಯವ್ಯಯ ಪಟ್ಟಿ ಎಂದು ನನಗನ್ನಿಸುವುದಿಲ್ಲ. ಅಷ್ಟೇ ಅಲ್ಲದೆ, ಕೊಟ್ಟಿರುವ ಹಣವನ್ನು ಸರಿಯಾಗಿ ಉಪಯೋಗಿಸದೆ ಯದ್ವಾತದ್ವಾ ಉಪಯೋಗಿಸಿದ್ದರಿಂದ ಇಂಥಾ ಪರಿಸ್ಥಿತಿ ಉದ್ಭವಿಸುವುದಕ್ಕೆ ಕಾರಣವಾಗಿದೆ ಎಂದು ನನಗನ್ನಿಸುತ್ತದೆ. ಮಾನ್ಯ ಸಚಿವರು ಹಲವಾರು ಬೇಡಿಕೆಗಳನ್ನು ಇಲ್ಲಿ ಮಂಡಿಸಿದ್ದಾರೆ. ಬೇಡಿಕೆ ಸಂಖ್ಯೆ ೯ ರಲ್ಲಿ "due to release of lottery tickets for sale, expenditure under these two items is more." ಎಂದು ಇದೆ. ಲಾಟರಿ ನಡೆಯುವುದರಲ್ಲಿ ಭಾರಿ ಮೋಸ ಆಗುತ್ತಿದೆ ಎನ್ನುವ ದೂರುಗಳು ಬಂದಿವೆ. ಕರ್ನಾಟಕ ಸರ್ಕಾರ ನಡೆಸುತ್ತಿರುವ ಲಾಟರಿ ಅಷ್ಟೊಂದು ಜನಪ್ರಿಯವಾಗುತ್ತಿಲ್ಲ, ಜನಪ್ರಿಯತೆ ಕುಗ್ಗಿದೆ. ಆದರೂ, ಅದಕ್ಕಾಗಿ ಇಷ್ಟೊಂದು ಹಣವನ್ನು ಕೇಳುತ್ತಿರುವುದನ್ನು ಗಮನಿಸಿದರೆ ಇದರಲ್ಲೇನೋ ಮೋಸ ವಿದೆ ಎನ್ನುವುದು ವ್ಯಕ್ತವಾಗುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಮೋಸ ನಡೆಯುತ್ತಿದೆ ಎಂದು ಹೇಳಬಾರದು. ನಮ್ಮ ಸರ್ಕಾರದವರು ಸುವ್ಯವಸ್ಥಿತ ರೀತಿಯಲ್ಲಿ ಲಾಟರಿ ಯೋಜನೆಯನ್ನು ನಡೆಸುತ್ತಿದ್ದಾರೆ ಎನ್ನುವ ಅಚಲ ನಂಬಿಕೆ ನಮ್ಮ ಜನರಲ್ಲಿದೆ. ಆದುದರಿಂದ, ಮಾನ್ಯ ಸದಸ್ಯರು ಈ ರೀತಿ ಹೇಳುವುದು ಸರಿಯಲ್ಲ. ನಿರ್ದಿಷ್ಟ ದೂರುಗಳೇನಾದರೂ ಇದ್ದರೆ ಅವನ್ನು ಸರ್ಕಾರದ ಗಮನಕ್ಕೆ ತನ್ನಿ. ಲಾಟರಿ ತೆಗೆಯುವ ಸ್ಥಳಕ್ಕೆ ಮಾನ್ಯ ಸದಸ್ಯರು ಹೋಗಿ ನೋಡಬೇಕು; ಬಹಳ ವೈಜ್ಞಾನಿಕವಾದ ರೀತಿಯಲ್ಲಿ ಲಾಟರಿ ಎತ್ತುವ ವ್ಯವಸ್ಥೆ ಇದೆ.

ಶ್ರೀಮತಿ ಎಸ್. ಪ್ರಮೀಳಾ.—ಸರ್ಕಾರ ಲಾಟರಿಯಾದೀತು ಎನ್ನುವುದು ಅವರ ಅನುಮಾನ!

ಶ್ರೀ ಭೀಮಣ್ಣ ಖಂಡ್ರೆ.—ನಮ್ಮ ಊರುಗಳ ಕಡೆ ಮಟ್ಕಾವನ್ನು ಬಹಳ ವ್ಯವಸ್ಥಿತವಾದ ರೀತಿ ಯಲ್ಲಿ ಆಡುತ್ತಾರೆ; ಅದಕ್ಕೂ ಸರ್ಕಾರ ಹಣ ಕೊಡಬಾರದೇಕೇ?

ಶ್ರೀ ಪಿ. ರಾಮದೇವ್.—ಮಾನ್ಯ ಅರ್ಥ ಮಂತ್ರಿಗಳು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಬೇಕಾದರೆ, ಮಾನ್ಯ ಸಚಿವರಿಗೆ ಅಂಕಿ-ಅಂಶಗಳನ್ನು ಕೊಡುತ್ತೇನೆ. ಹಿಂದೆ ಎಷ್ಟು ಲಾಟರಿ ಟಿಕೆಟ್ಟುಗಳನ್ನು ಮಾರಲಾಗುತ್ತಿತ್ತೋ ಅಷ್ಟನ್ನು ಇಂದು ಮಾರಲಾಗುತ್ತಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಟಿಕೆಟ್ಟುಗಳ ಮಾರಾಟದ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳಿ, ಆದರೆ ಮೋಸ ನಡೆಯುತ್ತಿದೆ ಎಂದು ಹೇಳಬೇಡಿ.

ಶ್ರೀ ಪಿ. ರಾಮದೇವ್.—ಜನರೆಲ್ಲ ಕರ್ನಾಟಕ ಲಾಟರಿ ಬಗ್ಗೆ ನಂಬಿಕೆ ಕಡಿಮೆಯಾಗಿರುವುದನ್ನೇ ತೋರಿಸುತ್ತದೆ, ಟಿಕೆಟ್ಟುಗಳ ಮಾರಾಟ ಪ್ರಮಾಣದ ಅಂಶ. ಆದುದರಿಂದ, ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಲಾಟರಿ ಟಿಕೆಟ್ಟುಗಳನ್ನು ತೆಗೆಯುವುದರಲ್ಲಿ ಅನುಸರಿಸುತ್ತಿರುವ ಪದ್ಧತಿ ಬಗ್ಗೆ ಜನಗಳಿಗೆ ವಿಶ್ವಾಸವಿಲ್ಲ. ಇದನ್ನು ಸರ್ಕಾರ ಪರಾಂಬರಿಸಬೇಕು.

ಇನ್ನು ಬೇಡಿಕೆ ಸಂಖ್ಯೆ ೧೫ ರಲ್ಲಿ ಕನ್ನಡದ ಬಗ್ಗೆ ಬಹಳ ಲಘುವಾಗಿ ಹೇಳಲಾಗಿದೆ. ಕರ್ನಾಟಕ ಏಕೀಕರಣವಾಗಿ ಸುಮಾರು ಇಪ್ಪತ್ತೆರಡು ವರ್ಷಗಳಾದರೂ ಇನ್ನೂ ಎಲ್ಲಾ ಇಲಾಖೆಗಳಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದು ದುಃಖ ಕರವಾದ ವಿಚಾರ. ರಾಜ್ಯ ಸರ್ಕಾರ ಹಂತಹಂತವಾಗಿ ಕನ್ನಡವನ್ನು ಎಲ್ಲ ಕ್ಷೇತ್ರಗಳಲ್ಲೂ ಜಾರಿಗೆ ತರುತ್ತೇವೆ ಎನ್ನುವ ನೀತಿಯನ್ನು ಇಟ್ಟುಕೊಂಡಿದ್ದರೂ ಇವತ್ತಿನವರೆಗೂ ಸಾಕಷ್ಟು ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡುವ ಜವಾಬ್ದಾರಿ ಕೆಲಸವನ್ನು ಮಾಡಲಿಲ್ಲ; ಇದು ದುರದೃಷ್ಟ. ಆದುದರಿಂದ, ಎಲ್ಲಾ ಇಲಾಖೆಗಳಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡಿ ಆದಷ್ಟು ಬೇಗ ಕನ್ನಡವನ್ನು ರಾಜ್ಯಮಟ್ಟದಲ್ಲಿ ತರತಕ್ಕ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ, ಕನ್ನಡದ ಕೆಲಸದ ಬಗ್ಗೆ ಎಷ್ಟಾದರೂ ಖರ್ಚು ಮಾಡಿ, ಅದಕ್ಕೆ ನಾವು ಪೂರ್ತಿ ಬೆಂಬಲ ಕೊಡುತ್ತೇವೆ. ಆದರೆ, ಈಗ ಕೊಟ್ಟಿರುವುದು ಮಾತ್ರ ಸಾಲದೆಂದು ಹೇಳುತ್ತೇನೆ.

ಬೇಡಿಕೆ ಸಂಖ್ಯೆ ೧೭ ರಲ್ಲಿ "ಸರ್ಕಾರವು ೪೨೬ ಫ್ಲಾಟ್ಸ್‌ನ್ನು ಜೀವವಿಮಾ ಸಂಸ್ಥೆಯಿಂದ ಖರೀದಿಸಿತು ಎಂದು ಇದೆ. ಈ ವ್ಯವಹಾರ ಒಂದು ದುಃಖದ ಕಥೆ. ತನ್ನ ಪಾಲಿಸಿ ಹೋಲ್ಡರ್ಸ್‌ಗೆ ಕೊಡಬೇಕೆನ್ನುವ ದೃಷ್ಟಿಯಿಂದ ಜೀವವಿಮಾ ಸಂಸ್ಥೆ ಅಲ್ಲಿ ೪೨೬ ಫ್ಲಾಟ್‌ಗಳನ್ನು ಕಟ್ಟಿದರು; ಮತ್ತು ಈ ಬಗ್ಗೆ ಪ್ರಚಾರ ಕೂಡ ಮಾಡಿದರು. ಪಾಲಿಸಿ ಹೋಲ್ಡರ್ಸ್‌ಗಳು ಅಲ್ಲಿಗೆ ಹೋಗಿ ಮನೆಗಳಿರುವ ಸ್ಥಿತಿಯನ್ನು ನೋಡಿ, ಆ ಮನೆಗಳು ಬೇಕೆಂದು ಯಾರೂ ಬಯಸಲಿಲ್ಲ, ಮತ್ತು ಅರ್ಜಿ ಹಾಕಿದ್ದ ಕೆಲವರೂ ತಮ್ಮ ಅರ್ಜಿಯನ್ನು ವಾಪಸ್ಸು ತೆಗೆದುಕೊಂಡರು. ಅಂಥಾ ಕೆಟ್ಟ ಮನೆಗಳವು. ಅನಂತರ, ಜೀವವಿಮಾ ಸಂಸ್ಥೆಯವರು ಭಾರತಾದ್ಯಂತ ಜಾಹಿರಾತು ಹೊರಡಿಸಿ, ಫ್ಲಾಟುಗಳನ್ನು ಕೊಡಲಾಗುವುದು ಎಂದು ಪ್ರಚಾರ ಮಾಡಿದರು.

4-00 ಪಿ. ಎಂ.

ಆದರೂ ಯಾರು ಕೊಂಡುಕೊಳ್ಳಲಿಲ್ಲ, ಇಂಥ ಒಂದು ದುರ್ಧೈವದ ಸ್ಥಿತಿಯಲ್ಲಿರತಕ್ಕ ಮನೆಗಳನ್ನು ತೆಗದುಕೊಳುವುದಕ್ಕೆ ಸುಮಾರು ೨ ಕೋಟಿ ರೂಪಾಯಿಗಳನ್ನು ಹಾಕಿರತಕ್ಕದ್ದು ದುರದೃಷ್ಟಕರ. ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ, ತಾವು ದಯವಿಟ್ಟು ಅಲ್ಲೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ. ಆ ಮನೆ ಹೇಗಿದೆ ಎಂಬುದನ್ನು ನೋಡಿ. ಅದು ಕುದುರೆ ಲಾಯಕ್ಕೂ ಲಾಯಕ್ಕಿಲ್ಲ. ಅಂಥ ಮನೆಗಳನ್ನು ತೆಗೆದುಕೊಂಡಿದ್ದೀರಿ. ಅದರ ಮೇಲೆ ಹಾಕಿರುವ ಹಣ ವೇಸ್ಟಾಗಿದೆ. ಈಗಲಾದರೂ ಹೇಳುತ್ತಿದ್ದೇನೆ ಈ ವಿಷಯವನ್ನು ಪರಾಂಬರಿಸಿ ಎಲ್. ಐ. ಸಿ. ಯವರಿಗೆ ಆ ಮನೆಗಳನ್ನು ವಾಪಸ್ ಕೊಡತಕ್ಕ ಕೆಲಸವನ್ನು ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ರಾಜ್ಯದ ಮೂರು ಅಕಾಡೆಮಿಗಳ ಬಗ್ಗೆ ಅದರಲ್ಲಿ ಹೇಳಿದ್ದಾರೆ. ಅದಕ್ಕೂ ಹೆಚ್ಚಾಗಿ ಹಣ ಹೇಳಿದ್ದಾರೆ. ಅಕಾಡೆಮಿಗಳು ಯಾವುದೂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಲ್ಲಿ ಮೀಟಿಂಗ್‌ಗಳಾಗಿ ಎಷ್ಟೋ ದಿವಸಗಳಾಗಿವೆ, ಮತ್ತು ಯಾರು ಯಾರಿಗೆ ಏನೇನು ಅಕಾಡೆಮಿಯಿಂದ ಕೊಡಬೇಕೋ ಏನು ಕೆಲಸಗಳು ಅಲ್ಲಿ ನಡೆಯಬೇಕೋ ಅದು ಆಗುತ್ತಿಲ್ಲ. ಡಿಮ್ಯಾಂಡ್ ನಂ. ೨೨ ರಲ್ಲಿ ಹೇಳಿರುವಹಾಗೆ ಪ್ರೈಮರಿ ಮತ್ತು ಸೆಕೆಂಡರಿ ಶಾಲಾ ಶಿಕ್ಷಕರಿಗೆ ಚೆಕ್ ಸಿಸ್ಟಂ ನಲ್ಲಿ ಸಂಬಳ ಪಾವತಿ ಮಾಡಿರುವ ಬಗ್ಗೆ ಹೇಳಿದ್ದಾರೆ. ಅದು ಒಂದು ಒಳ್ಳೆಯ, ಉತ್ತಮವಾದ ಕೆಲಸ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಇದರಲ್ಲಿ consequent on the introduction of cheque system of payment to salaries of Primary and Secondary School Teachers the work in the district office has been increased ಎಂದು ಹೇಳಿ ನಮಗೆ ಹಣ ಜಾಸ್ತಿ ಬೇಕು ಎಂದು ಹೇಳಿದ್ದಾರೆ. ಯಾವ ಉದ್ದೇಶದಿಂದ ತಾವು ಇದನ್ನು ತಂದಿದ್ದೀರಿ, ಚೆಕ್ ಸಿಸ್ಟಂ ಯಾತಕ್ಕೆ ತಂದಿದ್ದೀರಿ ಎಂಬುದನ್ನು ತಾವು ನೋಡಬೇಕು. ಎಲ್ಲಿ ಮೋಸ ಆಗುತ್ತಿದೆ ಎಂಬುದನ್ನು ತಾವು ನೋಡಬೇಕು. ಸರ್ಕಾರ ಕೊಡತಕ್ಕ ಹಣವನ್ನು ಉಪಾಧ್ಯಾಯರಿಗೆ ಪೂರ್ತಿಯಾಗಿ ಕೊಡುತ್ತಿಲ್ಲ, ತಾವು ಒಂದು ಒಳ್ಳೆಯ ಉದ್ದೇಶದಿಂದ ಉಪಾಧ್ಯಾಯರಿಗೆ ನೇರವಾಗಿ ಹಣ ಕೊಡಬೇಕು ಎಂಬ ದೃಷ್ಟಿಯಿಂದ ತಂದಿದ್ದೀರಿ. ಆದರೆ ಅಲ್ಲಿ ದೊಡ್ಡ ರ್‍ಯಾಕೆಟ್ (ಮೋಸ) ನಡೆಯುತ್ತಿದೆ. ಚೆಕ್ ಕೊಟ್ಟಮೇಲೆ ಇಷ್ಟು ಹಣ ವಾಪಸ್ ಕೊಡಬೇಕು ಎಂದು ಸಂಸ್ಥೆಯವರು ಹೇಳಿ ತೆಗೆದುಕೊಳ್ಳುತ್ತಿದ್ದಾರೆ ಈ ವಿಷಯ ಮಾನ್ಯ ಸದಸ್ಯರುಗಳಿಗೆ ಮತ್ತು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಈ ಚೆಕ್ ಸಿಸ್ಟಂ ಫಲಪ್ರದವಾಗಿ ಆಗಬೇಕಾದರೆ ದಯವಿಟ್ಟು ಮೋಸ ಏನು ನಡೆಯುತ್ತಿದೆ ಉಪಾಧ್ಯಾಯರ ವಿಷಯದಲ್ಲಿ ಅದನ್ನು ತಪ್ಪಿಸುವುದಕ್ಕೆ ಮಾರ್ಗ ಹುಡುಕಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಪತ್ತಾರ್ (ಜಮಖಂಡಿ).—ಸನ್ಮಾನ್ಯ ಸಭಾಧ್ಯಕ್ಷರೆ, ಪ್ರತಿ ಪಕ್ಷದವರು ಪ್ರತಿಪಾದಿಸುತ್ತಿರುವ ಒಂದು ಶೈಲಿ ನೋಡಿದರೆ ಒಂದು ವಿಷಯ ಹೇಳಬೇಕಾಗುತ್ತದೆ, ಲಾಯರ್ ಕೇಸ್ ಸರಿಯಾಗಿಲ್ಲದಿದ್ದಾಗ ಟೆಕ್ನಿಕಲ್ ಆಬ್ಜೆಕ್ಷನ್ ಹಾಕುತ್ತಾ ಇರುತ್ತಾರೆ. ಆ ರೀತಿ ಮಾನ್ಯ ಸದಸ್ಯರು ಟೆಕ್ನಿಕಲ್ ಆಬ್ಜೆಕ್ಷನ್ ಹಾಕುತ್ತಾ ಇದ್ದಾರೆ. ಒಂದು ಸರ್ಕಾರ, ದೂರದೃಷ್ಟಿಯುಳ್ಳ ಸರ್ಕಾರ, ಸಮಾಜವಾದದ ಧ್ಯೇಯವನ್ನು ಹೊತ್ತ ಸರ್ಕಾರ, ಜನತೆಯ ಕಲ್ಯಾಣವನ್ನು ಮುಂದೆ ಆದರ್ಶವಾಗಿಟ್ಟುಕೊಂಡು ನಡೆಯುತ್ತಿರತಕ್ಕ ಸರ್ಕಾರ ಹಲವಾರು ಯೋಜನೆಗಳನ್ನು ಏಕಾಏಕಿಯಾಗಿ ಹಮ್ಮಿಕೊಳ್ಳಬೇಕಾಗುತ್ತದೆ. ಹಲವಾರು ಕೆಲಸಗಳನ್ನು ಪೂರ್ವಾಪರ ಯೋಚನೆಯಿಲ್ಲದೆ ಮಾಡಬೇಕಾಗುತ್ತದೆ. ಉದಾಹರಣಾರ್ಥವಾಗಿ ಕುಡಿಯುವ ನೀರಿನ ಸಮಸ್ಯೆ ಬಂದಾಗ ಪೂರ್ವಾಪರ ಯೋಜನೆಯನ್ನು ಇಟ್ಟುಕೊಂಡು ಹಿಂದಿನ ಬಜೆಟ್ಟಿನಲ್ಲಿ ಸೇರಿಸಿಲ್ಲದಿದ್ದರೂ ತಕ್ಷಣ ಮಾಡಬೇಕಾಗುತ್ತದೆ. ಕೆಲವೊಂದು ಗಂಡಿಸಲುಗಳನ್ನು ಅಥವಾ

ಮನೆಗಳನ್ನು ಒದಗಿಸುವಾಗ ಇಷ್ಟೇ ಮನೆಗಳು ನಮಗೆ ಬೇಕಾಗುತ್ತದೆ, ಇಷ್ಟೇ ಗುಡಿಸಲುಗಳು ನಮಗೆ ಬೇಕಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅಂಥ ಕೆಲಸ ಮಾಡುವಾಗ ಸ್ವಲ್ಪ ಹೆಚ್ಚು ಖರ್ಚು ಮಾಡುವ ಅವಶ್ಯಕತೆ ಇರುತ್ತದೆ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಈ ಹೆಚ್ಚುವರಿ ಬೇಡಿಕೆ ಅತ್ಯಂತ ನ್ಯಾಯಯುತವಾಗಿದೆ ಎಂದು ಮೊದಲನೆಯದಾಗಿ ಹೇಳಬಯಸುತ್ತೇನೆ. ಎರಡನೆಯದಾಗಿ ಈಗ ಪ್ರತಿಪಕ್ಷದವರು ಯಾವ ಉದಾಹರಣೆಯನ್ನೂ ನಿರ್ದಿಷ್ಟವಾಗಿ ಕೊಡುತ್ತಿಲ್ಲ. ಅವರು ಜನರಲ್ಲಾಗಿ ಮಾತನಾಡುತ್ತಿದ್ದಾರೆ. ಇದು ಅನ್ಯಾಯ, ಅದು ಅನ್ಯಾಯ, ಹೀಗಾಗಬಾರದಾಗಿತ್ತು ಹಾಗಾಗಬಾರದಾಗಿತ್ತು ಎಂದು ಹೇಳುತ್ತಿದ್ದಾರೆ. ಪ್ರತ್ಯಕ್ಷ ಉದಾಹರಣೆಗಳನ್ನು ತೆಗೆದುಕೊಂಡು ವಿಮರ್ಶಿಸಿದ್ದಲ್ಲಿ ಸರ್ಕಾರ ಮಾಡಿರುವ ಕೆಲಸ ಯೋಗ್ಯವೋ ಅಯೋಗ್ಯವೋ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಈಗ ಯಾಗವುದೂ ಪ್ರತ್ಯಕ್ಷ ಉದಾಹರಣೆ ಇಲ್ಲದೆ ಮಾತನಾಡುವುದು ಸರಿಯಾಗಿ ಕಾಣುವುದಿಲ್ಲ ಎಂದು ನನ್ನ ಅಭಿಪ್ರಾಯ. ಖರ್ಚನ್ನು ಹೆಚ್ಚು ಮಾಡುವ ಅಧಿಕಾರ ಸರ್ಕಾರಕ್ಕಿರುತ್ತದೆ. ಆದರೆ ಹೆಚು ಖರ್ಚು ಮಾಡಿರುವುದು ಚುನಾವಣೆ ಉದ್ದೇಶಕ್ಕೋಸ್ಕರ ಎಂದು ಪ್ರತಿಪಕ್ಷದವರು ಹೇಳುತ್ತಿರುವುದು ಅಷ್ಟು ಸ್ತುತ್ಯಾರ್ಹವಾದ ಸಂಗತಿ ಅಲ್ಲ. ಅವರ ಸರ್ಕಾರ ಬಂದಿರುವಾಗ ಅವರೂ ತಮ್ಮ ಅಧಿಕಾರವನ್ನು ಮುಂದೆ ಉಳಿಸಿಕೊಂಡು ಹೋಗುವ ಉದ್ದೇಶದಿಂದ ಹಲವಾರು ಕಾರ್ಯಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ನಮ್ಮ ಪಕ್ಷದ ಸರ್ಕಾರದವರೂ ಅದೇ ರೀತಿ ಅಧಿಕಾರವನ್ನು ಮುಂದುವರೆಸಿಕೊಂಡು ಹೋಗಬೇಕು ಎಂದು ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಮಾಡಿದ ಕೆಲಸ ಕಾರ್ಯಗಳು ಒಳ್ಳೆಯದೋ, ಕೆಟ್ಟದ್ದೋ ಎಂಬುದನ್ನು ಪರಾಮರ್ಶಿಸಬೇಕು. ಜನತೆಯ ಕಲ್ಯಾಣಕ್ಕೋಸ್ಕರ ಮಾಡಿದ್ದಾರೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಬರೀ ಚುನಾವಣೆ ದೃಷ್ಟಿಯಿಂದ ಮಾಡಿದ್ದಾರೆ ಎಂದು ಅವರು ಹೇಳುವುದು ಅಷ್ಟು ಸ್ತುತ್ಯವಾದ ವಾದವಲ್ಲ ಎಂದು ಹೇಳಿ ಹೆಚ್ಚುವರಿ ಬೇಡಿಕೆಯನ್ನು ಮಂಜೂರು ಮಾಡುವುದಕ್ಕೆ ಬೆಂಬಲಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬಸವನ ಗುಡಿ).—ಸನ್ಮಾನ್ಯ ಅಧ್ಯಕ್ಷರೆ, ಈ ಹಿಂದೆ ಮಾತನಾಡಿದಂಥ ನನ್ನ ಮಿತ್ರರು ಮಾತನಾಡುವಾಗ ಈ ಸಪ್ಲಿಮೆಂಟರಿ ಬಜೆಟ್ಟಿನಲ್ಲಿ ೧/೩ ಭಾಗಕ್ಕಿಂತ ಹೆಚ್ಚಾಗಿ ಹಣ ಕೇಳತಕ್ಕದ್ದು ಸೂಕ್ತವಾದುದಲ್ಲ ಎಂದು ಹೇಳಿ ಅದಕ್ಕೆ ಕಾರಣ ಏನು ಎಂದೂ ಹೇಳಿದ್ದಾರೆ, ಈ ಬಜೆಟ್ಟನ್ನು ಮಾಡುವ ಉದ್ದೇಶ ಏನೆಂದರೆ ಮಾಡತಕ್ಕ ಖರ್ಚಿನ ಮೇಲೆ ಹಿಡಿತ ಇರಲಿ ಎಂದು. ಇದರಲ್ಲಿ ಹಿಡಿತ ಇಲ್ಲದೆ ಇದ್ದ ಪಕ್ಷದಲ್ಲಿ ಖರ್ಚು ಮಾಡತಕ್ಕ ಅಧಿಕಾರಿಗಳು ಯದ್ವಾತದ್ವ ಖರ್ಚು ಮಾಡುವುದಕ್ಕೆ ಅವಕಾಶ ಇರುತ್ತದೆ. ಇಲ್ಲಿ ಹೆಚ್ಚಾಗಿ ಟೋಕನ್ ಗ್ರಾಂಟ್ ಕೇಳಿದ್ದೀರಿ. ಇಷ್ಟೇ ಖರ್ಚು ಮಾಡಬೇಕು ಎಂದು ಸ್ಥಿಮಿತ ಇಲ್ಲದೇ ಇದ್ದ ಪಕ್ಷದಲ್ಲಿ ಸ್ವೇಚ್ಛೆಯಾಗಿ ಖರ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಸಾಧ್ಯವಾದಷ್ಟು ಟೋಕನ್ ಗ್ರಾಂಟ್ ಕೊಡುವುದು ಅಷ್ಟು ಸರಿಯಾದುದಲ್ಲ ಎಂದು ನನಗನ್ನಿಸುತ್ತದೆ. ಟ್ಯಾಕ್ಸ್ ಕಲೆಕ್ಷನ್ ಸರಿಯಾಗಿ ಆಗಿಲ್ಲ, ಕಡಿಮೆಯಾಗಿದೆ ಎಂದು ಇದರಲ್ಲಿದೆ. ಟ್ಯಾಕ್ಸ್ ಕಲೆಕ್ಷನ್ ಕಡಿಮೆಯಾಗಿರುವುದಕ್ಕೆ ಕಾರಣ ಏನು ಎಂಬುದನ್ನು ಸರ್ಕಾರ ಯೋಚಿಸಬೇಕಾದ ಅವಶ್ಯಕತೆ ಇದೆ. ಸಾಧಾರಣವಾಗಿ ಯಾವುದಾದರೂ ಡಿಫಿಸಿಟ್ ಆದರೆ ಹೆಚ್ಚಿಗೆ ಬರುವ ವರಮಾನದಿಂದ ಭರ್ತಿ ಮಾಡುವುದಕ್ಕೆ ಅವಕಾಶ ಇದೆ. ಈಗ ಲೆಕ್ಕ ಹಾಕಿದಷ್ಟು ಟ್ಯಾಕ್ಸ್ ಬರದೇ ಇರುವುದಕ್ಕೆ ಏನು ಎಂಬುದನ್ನು ನೋಡಬೇಕಾಗುತ್ತದೆ. ಕಲೆಕ್ಷನ್ ಇನ್ಎಫಿಷಿಯೆಂಟಾಗಿ ನಡೆದಿದೆಯೋ ಅಥವಾ ಇನ್ನೇನಾದರೂ ಕಾರಣ ಇದೆಯೋ ಎಂಬ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಅನ್ನಿಸುತ್ತದೆ. ಸಪ್ಲಿಮೆಂಟರಿ ಎಸ್ಟಿಮೇಟ್ ೨೦೮ ಕೋಟಿ ರೂಪಾಯಿ ಇದ್ದರೂ ಕೂಡ ೫೦ ಕೋಟಿ ರೂಪಾಯಿ ಸೆಂಟರಲ್ ಅಸಿಸ್ಟೆನ್ಸ್‌ನಿಂದ ಕವರ್ ಆಗುತ್ತದೆ, ಬುಕ್ ಅಡ್ಜಸ್ಟ್‌ಮೆಂಟ್‌ನಿಂದ ೧೩೧ ಕೋಟಿ ರೂಪಾಯಿ ಇದೆ. ಕೆಲವು ನ್ಯಾಯವಾದ ಬೇಡಿಕೆಗಳಿದ್ದರೂ ಕೂಡ ಸಾಧ್ಯವಾದಷ್ಟು ಬಜೆಟ್ ಮಾಡುವಾಗ ಸ್ಥಿಮಿತವಾಗಿ ಇಟ್ಟುಕೊಳ್ಳದೇ ಹೋದಪಕ್ಷದಲ್ಲಿ ಅಧಿಕಾರಿಗಳು ಸ್ವೇಚ್ಛೆಯಾಗಿ ಖರ್ಚುಮಾಡುವುದಕ್ಕೆ ದಾರಿಯಾಗುತ್ತದೆ. ಇಂಟರೆಸ್ಟ್ ಪೇಮೆಂಟ್ ೧ ಕೋಟಿ ೪೦ ಲಕ್ಷ ಎಂದು ಹೇಳಿದ್ದೀರಿ, ಇಷ್ಟು ಹೆಚ್ಚಿನ ಮೊತ್ತದ ಬಡ್ಡಿ ಹೇಗೆ ಬಜೆಟ್ಟಿನಲ್ಲಿ ಬಿಟ್ಟುಹೋಯಿತು ಎಂಬ ಬಗ್ಗೆ ಯೋಚನೆ ಮಾಡಬೇಕು. ಕೋ-ಅಪರೇಟೀವ್ ಸೊಸೈಟೀಸ್ ಬಗ್ಗೆ ಹೇಳಬೇಕೆಂದರೆ ಸರ್ಕಾರ ಸಹಕಾರ ಸಂಘಗಳನ್ನೆಲ್ಲಾ ಸರ್ಕಾರಿ ಸಂಘಗಳನ್ನಾಗಿ ಮಾಡಿಕೊಂಡಿರುವುದರಿಂದ ವೆಚ್ಚ ಹೆಚ್ಚಾಗಿ ಅದರ ಬೆಳವಣಿಗೆ ಸರಿಯಾಗಿ ಆಗುತ್ತಿಲ್ಲ. ಇದಕ್ಕೆ ಹೆಚ್ಚುವರಿಯಾಗಿ ೩ ಕೋಟಿ ೫೬ ಲಕ್ಷ ಖರ್ಚು ಮಾಡುವ ಬೇಡಿಕೆ ಇದೆ. ಸಹಕಾರಿ ಸಂಸ್ಥೆಗಳು ಸಾಧ್ಯವಾದಷ್ಟೂ ತಮ್ಮ ಕಾಲಿನಮೇಲೆ ತಾವು ನಿಂತುಕೊಳ್ಳದೇ ಇದ್ದ ಪಕ್ಷದಲ್ಲಿ ಖಂಡಿತವಾಗಿ

ನಾವು ಸಹಕಾರವನ್ನು ಬೆಳೆಸುವುದಕ್ಕಾಗುವುದಿಲ್ಲ. ಮತ್ತು ಸೊಸೈಟಿಯಿಂದ ಜನಗಳಿಗ ಒಳ್ಳೆಯದಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಮತ್ತು ನೀವು ತೆಗೆದುಕೊಂಡಿರತಕ್ಕ ಸಾಲ ಸೋಲಗಳ ಬಗ್ಗೆ ಸ್ವಲ್ಪ ಗಮನ ಇಟ್ಟುಕೊಂಡು ಕೆಲಸ ಮಾಡಬೇಕು. ಸಾಧಾರಣವಾಗಿ ಸಾಲ ತೀರಿಸುವುದಕ್ಕೆ ಫಂಡ್ಸ್ ಕ್ರಿಯೇಟ್ ಮಾಡುತ್ತಾರೆ. ನಮ್ಮಲ್ಲಿ ಆ ರೀತಿ ಆಗಿದೆಯೇ ಆಗದೇ ಇರುವುದಕ್ಕೆ ಏನು ಕಾರಣ ಎಂಬುದನ್ನು ನೋಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಾಲ ತೀರಿಸುವುದಕ್ಕೆ ಬಾಂಡ್ಸ್ ಇಷ್ಯೂ ಮಾಡಬೇಕಾಗುತ್ತದೆ ಅಥವಾ ಖರ್ಚಿನ ಬಾಬ್ತನ್ನು ಯಾವುದಾದರೂ ಕಡಿಮೆ ಮಾಡಬೇಕಾಗುತ್ತದೆ. ಸಾಲ ತೆಗೆದುಕೊಳ್ಳುವಾಗ ಸ್ವಲ್ಪ ಯೋಚನೆ ಮಾಡಿ ತೆಗೆದುಕೊಳ್ಳುವುದು ಒಳ್ಳೆಯದು. ೨೦೦ ಕನ್ನಡ ಟೈಪ್‌ರೈಟರುಗಳನ್ನು ತೆಗೆದುಕೊಳ್ಳಬೇಕು ಎಂಬ ಬೇಡಿಕೆ ಇದೆ, ಸುಮಾರು ೧೦–೧೫ ವರ್ಷದಿಂದಲೂ ಒಂದೇ ಸಮನೇ ಕನ್ನಡವನ್ನು ಬೆಳೆಸಬೇಕು ಎಂದು ಹೇಳುತ್ತಿದ್ದರೂ ಕೂಡ ಕನ್ನಡ ಇನ್ನೂ ಆಡಳಿತ ಭಾಷೆಯಾಗಿಲ್ಲ, ಆದರೆ ಕನ್ನಡದ ಬಗ್ಗೆ ದುಡ್ಡು ಮಾತ್ರ ಖರ್ಚಾಗುತ್ತಿದೆ, ಕನ್ನಡ ಅಭಿವೃದ್ಧಿಯಾಗುತ್ತಿಲ್ಲ. ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ೨೫–೩೦ ಕನ್ನಡ ಟೈಪ್‌ರೈಟರುಗಳನ್ನು ತೆಗೆದುಕೊಂಡು ಬಂದರು. ಕಾರ್ಪೊರೇಷನ್ನಿನ ಚುನಾಯಿತ ಸದಸ್ಯರು ಮನೆಗೆ ಹೋದಮೇಲೆ ಟೈಪ್‌ರೈಟರುಗಳನ್ನು ಉಪಯೋಗಿಸುತ್ತಲೇ ಇಲ್ಲ. ಟೈಪ್‌ರೈಟರ್ ಮೇಲೆ ಈಗ ಧೂಳು ತುಂಬಿಕೊಂಡಿದೆ. ಹೀಗೆ ಅಧಿಕಾರಿಗಳು ಕನ್ನಡವನ್ನು ಉಪಯೋಗಿಸದೇ ಇದ್ದಾಗ, ಕನ್ನಡ ಬೆಳವಣಿಗೆ ಆಗದೇ ಇದ್ದಾಗ ಟೈಪ್‌ರೈಟರ್ ಏತಕ್ಕೆ ಎಂದು ಯೋಚನೆ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಮಾನ್ಯ ಸದಸ್ಯರಾದ ರಾಮದೇವ್ ಅವರು ಮಾತನಾಡುತ್ತಾ ಎಲ್.ಐ.ಸಿ. ಯಿಂದ ತೆಗೆದುಕೊಂಡಿರತಕ್ಕ ಮನೆಗಳು ಸರಿಯಾದುದಲ್ಲ, ಯಾರಿಗೂ ಬೇಡದೇ ಇರತಕ್ಕ ಮನೆಗಳು ಅವು ಎಂದು ಹೇಳಿದ್ದಾರೆ. ಅವರು ಹೇಳಿರುವುದರಲ್ಲಿ ಸತ್ಯಾಂಶ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಾಟರಿ ಟಿಕೆಟ್ ಬಗ್ಗೆ ಮಾತನಾಡಿದ ಮಾನ್ಯ ಮಂತ್ರಿಗಳು ಲಾಟರಿ ಸರಿಯಾಗಿ ನಡೆಯುತ್ತಿದೆ ಎಂಬ ಆಶ್ವಾಸನೆಯನ್ನು ಕೊಟ್ಟರು. ಲಾಟರಿ ಟಿಕೆಟ್‌ನಲ್ಲಿ ಕೆಲವು ಬೋಗಸ್ ಟಿಕೆಟ್ ಖರ್ಚಾಗುತ್ತಿದೆ. ಅನೇಕರು ಇದರಲ್ಲಿ ರ್‍ಯಾಕೆಟ್ ಮಾಡಿಕೊಂಡು ಇದರಲ್ಲಿ ಮೋಸ ಮಾಡುತ್ತಿದ್ದಾರೆ ಎಂದು ನಮ್ಮ ಗಮನಕ್ಕೆ ಬಂದಿದೆ. ಎಷ್ಟು ವರ್ಷದಿಂದ ಲಾಟರಿ ಟಿಕೆಟ್ ಮಾರುತ್ತಿದ್ದಾರೆ, ಸರ್ಕಾರಕ್ಕೆ ಎಷ್ಟು ಉಳಿದಿದೆ, ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಸ್ವಲ್ಪ ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಬರುಬರುತ್ತಾ ಲಾಟರಿ ದುಡ್ಡು ಕಡಿಮೆಯಾಗುತ್ತಿದೆ, ಖರ್ಚು ಜಾಸ್ತಿಯಾಗುತ್ತಿದೆ. ಜನರಿಗೆ ಇದರಿಂದ ಏನಾದರೂ ಉಪಯೋಗವಾಗುತ್ತದೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು. ಸರ್ಕಾರಕ್ಕೆ ಇದರಿಂದ ಲಾಭವಿಲ್ಲದಿರುವುದರಿಂದ ಈ ವ್ಯವಹಾರವನ್ನು ಸಾಧ್ಯವಾದಷ್ಟು ಬೇಗನೆ ನಿಲ್ಲಿಸಿದರೆ ಒಳ್ಳೆಯದೆಂದು ಕಾಣುತ್ತದೆ. ಇನ್ನು ಫ್ಯಾಮಿಲಿ ಪೆನ್‌ಶನ್ ಬಗ್ಗೆ ಹೇಳುವುದಾದರೆ, ಅದನ್ನು ಪಡೆಯಲು ಅನೇಕ ತೊಡಕುಗಳಿವೆ, ಅನೇಕರಿಗೆ ರೆಕಾರ್ಡ್ಸ್ ಸಿಗುವುದಿಲ್ಲ. ಆದ್ದರಿಂದ ಈ ಬಗ್ಗೆಯೂ ಕೂಡ ಯೋಚನೆ ಮಾಡಬೇಕು. ಖಾಸಗೀ ಶಾಲೆಗಳ ಬಗ್ಗೆ ಹೇಳುವುದಾದರೆ, ಅಲ್ಲಿನ ಶಿಕ್ಷಕರಿಗೆ ಚೆಕ್ ಮೂಲಕ ಸಂಬಳವನ್ನು ಪಾವತಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ; ಸರಿ. ಎಷ್ಟೋ ಕಡೆ ಅನೇಕ ಖಾಸಗಿ ಶಾಲೆಗಳವರು ಲೆಕ್ಕವಿಲ್ಲದಷ್ಟು ಡೊನೇಷನ್ಸ್ ಮತ್ತು ಫೀಜುಗಳನ್ನು ವಸೂಲ್ಮಾಡುತ್ತಿದ್ದಾರೆ. ಇದನ್ನು ತಪ್ಪಿಸದೆ ಹೋದರೆ ಲೂಟಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿಯೂ ಪೋಷಕರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹಾಗೂ ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ; ಇಂಥ ಶಾಲೆಗಳ ಅವ್ಯವಹಾರವನ್ನು ಮೊದಲು ತಪ್ಪಿಸಬೇಕು ಎಂದು. ಶಾಲೆಗೆ ಗ್ರಾಂಟ್, ಉಪಾಧ್ಯಾಯರಿಗೆ ಸಂಬಳ ಇಷ್ಟೆಲ್ಲ ಕೊಟ್ಟರೂ ಡೊನೇಷನ್, ಫೀಜು ವಗೈರೆ ತೆಗೆದುಕೊಂಡರೆ ಯಾವ ನ್ಯಾಯ ? ಆದ್ದರಿಂದ ಇಂಥ ವ್ಯಾಪಾರೀ ಮನೋವೃತ್ತಿಯ ಸಂಸ್ಥೆಗಳನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿ. ತಾವು ತೆಗೆದುಕೊಳ್ಳತಕ್ಕದ್ದು ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚಾದರೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಅಲ್ಲಿರುವವರ ಪಾಕೆಟ್‌ಗಳು ಭರ್ತಿಯಾದರೆ ಅದು ತಂದೆ ತಾಯಿಗಳ ಶೋಷಣೆ ಮಾಡಿದಂತಾಗುತ್ತದೆಯಾದ್ದರಿಂದ ಇದು ಒಳ್ಳೆಯದಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಿನೀಮಾಗಳ ಬಗ್ಗೆ ಹೇಳುವುದಾದರೆ, ಒಳ್ಳೆಯ ಸಿನೇಮಾಗಳು ಬರಬೇಕೆಂಬ ಉದ್ದೇಶದಿಂದ ಸಬ್ಸಿಡಿ ಕೊಡುತ್ತಿದ್ದೀರಿ. ಆದರೆ ಸುಮಾರು ೨೦–೩೦ ಸಿನೇಮಾಗಳಿಗೆ ಯಾವ ವಿಧವಾದ ಹಣವನ್ನು ಕೊಟ್ಟಿಲ್ಲವೆಂದು ಕೇಳಿದ್ದೇನೆ. ಸಬ್ಸಿಡಿ ಕೊಡು

ವುದಾದರೆ ಅವುಗಳ ಗುಣಮಟ್ಟವನ್ನು ನೋಡಿ ಕೊಡಿ; ಇಲ್ಲದಿದ್ದರೆ ಎಲ್ಲವಕ್ಕೂ ಕೊಡಿ. ಆದರೆ ಕೊಡುತ್ತೇವೆಂದು ಹೇಳಿ ಅನೇಕ ಸಿನೇಮಾಗಳು ತಯಾರಾಗಿದ್ದರೂ ಕೊಡದೇ ಹೋದರೆ ಸರಿಹೋಗುವುದಿಲ್ಲ. ಒಟ್ಟಿನಲ್ಲಿ ಅವುಗಳ ಗುಣಮಟ್ಟ ಚನ್ನಾಗಿದ್ದರೆ ಅಂಥವಕ್ಕೆ ಸಬ್ಸಿಡಿ ಕೊಡುತ್ತೇವೆಂಬ ತೀರ್ಮಾನ ತೆಗೆದುಕೊಳ್ಳುವುದೊಳ್ಳೆಯದೆಂದು ಸಲಹೆ ಮಾಡುತ್ತೇನೆ. ಈ ಬಗ್ಗೆ ಒಂದು ನಿರ್ಧಿಷ್ಟವಾದ ನಿಲುವನ್ನು ತೆಗೆದುಕೊಳ್ಳದಿದ್ದರೆ ಒಳ್ಳೆಯದಾಗುವುದಿಲ್ಲ. ಇನ್ನು ಸರ್ಕಾರಿ ನೌಕರರ ಮೇಲೆ ಹೇರಿರುವ ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆಯುಬೇಕೆಂದು ಹೇಳುತ್ತೇನೆ. ಅವರಿಗೆ ಡಿ. ಎ. ಕೊಡುತ್ತೆವೆಂದು ಕೊಟ್ಟು ಈ ಕಡೆ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಈ ಕಡೆ ಕೊಡುವುದು, ಆ ಕಡೆ ಕಿತ್ತುಕೊಳ್ಳುವುದು. ಈ ವ್ಯವಹಾರ ನಿಲ್ಲಬೇಕು. ನೀವು ಡಿ. ಎ. ಕೊಡದಿದ್ದರೂ ಪರವಾಗಿಲ್ಲ, ಈಗ ವಿಧಿಸಿರುವ ತೆರಿಗೆಯನ್ನು ಮೊದಲು ತೆಗೆಯಿರಿ. ದಯವಿಟ್ಟು ಈ ಬಡ್ಜೆಟ್ ಅಧಿವೇಶನ ಮುಗಿಯುವುದರೊಳಗೆ, ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆಯುವ ಭರವಸೆ ಕೊಡುತ್ತೀರೆಂದು ನಂಬಿದ್ದೇನೆ. ಸರ್ಕಾರ ಖರ್ಚು ಮಾಡತಕ್ಕ ಹಣಕ್ಕೆ ಹಿಡಿತ ಇಲ್ಲವೆಂದು ನನಗನ್ನಿಸುತ್ತದೆ. ಆದ್ದರಿಂದ ಸಾಧ್ಯವಾದಷ್ಟೂ ಕೂಡ ಖರ್ಚು ಮಾಡತಕ್ಕ ಹಣ ಜನಗಳ ಸುಖಕ್ಕೆ ಖರ್ಚಾಗುವ ರೀತಿಯಲ್ಲಿ ನೋಡಿಕೊಳ್ಳಬೇಕೆಂದೂ, ಯಾವುದಕ್ಕೂ ವೇಸ್ಟ್ ಆಗದಂತೆ ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ತಕ್ಕೆಡ್ (ಪರಸಗಡ).—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೇಳಿರುವ ೨೦೮ ಕೋಟಿ ರೂಪಾಯಿ ಹೆಚ್ಚುವರಿ ಬೇಡಿಕೆ ನ್ಯಾಯಸಮ್ಮತವಾದ ಬೇಡಿಕೆ ಎಂದೆನಿಸುತ್ತದೆ. ಸರ್ಕಾರ ಪ್ರತಿಯೊಂದು ಖಾತೆಯಲ್ಲೂ ಜನಹಿತ ಕಾರ್ಯಗಳನ್ನು ಮಾಡುವಂತಹ ಯೋಜನೆಗಳನ್ನು ರೂಪಿಸಿದೆ. ನಾನು ಸಮಾಜ ಕಲ್ಯಾಣ ಶಾಖೆಯ ಬಗ್ಗೆ ಮಾತನಾಡುವುದಾದರೆ, ಈ ಶಾಖೆ ಹರಿಜನ ಗಿರಿಜನರ ಸಲುವಾಗಿ, ಹಿಂದುಳಿದ ವರ್ಗದವರ ಸಲುವಾಗಿ ಏನು ಒಂದು ಕಾರ್ಯವನ್ನು ಮಾಡಿದೆ ಅದು ಜನತೆಯ ಒಂದು ಸರ್ವಾಂಗೀಣ ಉನ್ನತಿಯ ಸಲುವಾಗಿ ಹಾಕಿಕೊಂಡ ದಿಟ್ಟ ಕ್ರಮ ಎಂದೆನಿಸುತ್ತದೆ. ಇವತ್ತು ಜನರಿಗೆ ಅನ್ನ, ಅರಿವೆ ಆಸರೆ, ಆರೋಗ್ಯ, ಅಕ್ಷರ ಈ ಐದು ಸೌಲಭ್ಯಗಳು ಸಿಗಬೇಕಾಗಿದೆ. ಇಂಥ ಜೀವನದ ಮೂಲ ಅವಶ್ಯಕ ವಸ್ತುಗಳು ಇವತ್ತು ನೂರಕ್ಕೆ ೪೦-೪೫ ರಷ್ಟಿರುವ ಹಿಂದುಳಿದ ಹಾಗೂ ಅತ್ಯಂತ ದುರ್ಬಲ ವರ್ಗದ ದಲಿತ ಜನರಿಗೆ ಸಿಗುವುದು ಬಹಳ ಅವಶ್ಯಕವಾಗಿದೆ. ಇಂಥ ಜನತೆಯ ಸಲುವಾಗಿ ಸರ್ಕಾರದವರು ಕೈಗೊಂಡ ಈ ದಿಟ್ಟ ಕ್ರಮ ಅತ್ಯಂತ ಸ್ವಾಗತಾರ್ಹವಾದುದು; ಹಾಗೂ ಸರ್ಕಾರ ಅಭಿನಂದನೆಗೆ ಪಾತ್ರವಾಗಿದೆ. ಇನ್ನು ಮಧ್ಯಪಾನ ಸ್ವಯಂ ಮಂಡಲಿಯ ಸಲುವಾಗಿ ಸರ್ಕಾರ ಹಣ ಖರ್ಚು ಮಾಡುವುದು ಅತ್ಯಂತ ಸೂಕ್ತವಾದುದು. ಈ ಗಾಗಲೇ ಬಡ್ಜೆಟ್ಟಿನಲ್ಲಿ ಸೂಚಿಸಿರುವ ಹಾಗೆ ವಾರದಲ್ಲಿ ಕೆಲವೊಂದು ದಿನಗಳನ್ನು ಪಾನ ನಿಷೇದ ದಿನಗಳೆಂದು ಆಚರಿಸಲು ತೀರ್ಮಾನಿಸಿರುವುದು ಸಂತೋಷದ ವಿಷಯ. ನಮ್ಮ ಸಮಾಜದಲ್ಲಿ ಬಹಳ ಮಂದಿ ಕುಡುಕರಿದ್ದಾರೆ. ಅವರ ಆ ಒಂದು ಕೆಟ್ಟ ಚಟವನ್ನು ಬಿಡಿಸಬೇಕೆಂದರೆ, ಅವರಿಗೆ, ಇದನ್ನು ಬಿಡದಿದ್ದರೆ ನಿಮ್ಮ ವಿಚಾರ, ವಿವೇಚನೆ, ಪ್ರಜ್ಞೆ ಹಾಳಾಗುತ್ತದೆಂದು ತಿಳುವಳಿಕೆ ನೀಡಬೇಕು. ಯಾವ ರೀತಿ ಸಮಜದಲ್ಲಿ ಕುಡುಕರು ತಮ್ಮ ಆರ್ಥಿಕ ಸಾಮಾಜಿಕ ಮತ್ತಿತರ ಸ್ಥಿತಿಗತಿಗಳನ್ನು ಕಳೆದುಕೊಳ್ಳುತಾರೆಂಬುದನ್ನು ನಾವುಜನತೆಗೆ ತಿಳಿಸಿಕೊಡಬೇಕಾಗಿದೆ. ಅದರಲ್ಲಿಯೂ ಹಿಂದುಳಿದ ವರ್ಗದ ಜನತೆಗೆ ಮಧ್ಯಪಾನ ಸ್ವಯಂ ಮಂಡಲಿಯ ಮುಖೇನ ಸಾಕಷ್ಟು ರೀತಿಯಿಂದ ತಿಳುವಳಿಕೆ ಕೊಡಬೇಕಾಗಿದೆ. ಇಂಥ ಸಮಾಜ ಸುಧಾರಣಾ ಕಾರ್ಯವನ್ನು ಈ ಮಂಡಲಿಯು ಒಂದು ಯೋಗ್ಯ ದಿಸೆಯಲ್ಲ ಯೋಗ್ಯ ಮಾರ್ಗದಲ್ಲಿ ಅವರವರ ಮನೆ ಬಾಗಿಲಿಗೆ ಹೋಗಿ ಇದರಿಂದಾಗುವಂತಹ ಹಾನಿಯನ್ನು ತಿಳಿಸಿಕೊಡುವಂತಹದನ್ನು ನೋಡಿ ನಾವು ಶ್ಲಾಘಿಸಬೇಕಾಗಿದೆ. ಇನ್ನು ದೊಡ್ಡ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ಬೆಳಗಾಂ ಭಾಗದಲ್ಲಿರುವ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಂದ ಸಾಮಾನ್ಯ ಜನತೆಗೆ ಸಾಮಾನ್ಯ ರೈತರಿಗೆ ಅವರ ಆರ್ಥಿಕ ಆದಾಯದಲ್ಲಿ ಹೆಚ್ಚಳ ಕಂಡುಬಂದಿದೆ. ಇವತ್ತು ಅವರ ಸ್ಥಿತಿಗತಿಗಳು ಸಂಪೂರ್ಣವಾಗಿ ಸುಧಾರಣೆಯಾಗಿದೆ ಎಂದು ಧೈರ್ಯವಾಗಿ ಹೇಳುತ್ತೇನೆ. ಇವತ್ತು ನನ್ನ ಭಾಗದಲ್ಲಿರುವ ಮಲಪ್ರಭಾ ಯೋಜನೆಯಿಂದ ಬಂಗಾರದ ನೀರು ಹರಿದಂತೆ ಆ ಊರಿಗೆ ಗಂಗಾಜಲ ಬಂದು ಹಸಿರು ಬಣ್ಣ ಕಾಣುತ್ತಿದೆ. ಈ ದಿಸೆಯಲ್ಲಿ ಸರ್ಕಾರ ಮಾಡಿದಂತಹ ಕಾರ್ಯವನ್ನು ಇವತ್ತು ಅಲ್ಲಿನ ಜನತೆ ಆದರದಿಂದ ಅಭಿಮಾನದಿಂದ, ಆತ್ಮೀಯತೆಯಿಂದ ಸ್ವಾಗತಿಸುತ್ತಿದೆ. ಸರ್ಕಾರ ಏನು ರೈತರ ಒಂದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ದೊಡ್ಡದೊಡ್ಡ ಯೋಜನೆಗಳನ್ನು ಹಾಕಿಕೊಂಡು ಇವತ್ತು ೧೦ ಕೋಟಿಗಿಂತಲೂ ಹೆಚ್ಚು ಹೆಚ್ಚುವರಿ ಬೇಡಿಕೆಯನ್ನಿಟ್ಟು ಕೊಂಡು ಖರ್ಚು ಮಾಡು

ವಂಥದುಏನಿದೆ ಇದು ನ್ಯಾಯಸಮ್ಮತವಾದರಿಂದ ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು. ಇನ್ನು ಹರಿಜನಗಿರಿಜನರಿಗೆ ಅವಶ್ಯವಾಗಿ ವಸತಿ ಸೌಕರ್ಯವನ್ನು ಮಾಡಿಕೊಡಬೇಕಾಗಿದೆ. ಅದನ್ನು ಚಾಚೂ ತಪ್ಪದೆ (ಚುನಾವಣಾ ಪ್ರಣಾಲಿಕೆಯಲ್ಲಿ ಜನತೆಗೆ ಕೊಟ್ಟಂತಹ ಆಶ್ವಾಸನೆಯಂತೆ) ಮಾಡಿಕೊಡಬೇಕು. ಇನ್ನು ೫ ವರ್ಷಗಳಲ್ಲಿ ಒಂದು ಹುಲ್ಲಿನ ಗುಡಿಸಲುಗಳು ಇಲ್ಲದಂತೆ ನೋಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸರ್ಕಾರದವರು ಹರಿಜನಗಿರಿಜನರಿಗೆ ಎಲ್ಲರಂತೆ ಸಮಾನವಾದ ಮನೆಗಳನ್ನು ಕಟ್ಟಿಸಿಕೊಡಬೇಕು, ಬೇಸತ್ತಾಗ ಅವರಿಗೆ ಇರಲಿಕ್ಕೆ, ನಿದ್ರೆ ಮಾಡಲಿಕ್ಕೆ ವ್ಯವಸ್ಥಿತವಾದ ಮನೆಯನ್ನು ಕಟ್ಟಿಕೊಡಬೇಕು. ಸರ್ಕಾರ ಈ ದಿಸೆಯಲ್ಲಿ ಇನು ಹೆಚ್ಚು ಹಣವನ್ನೂ ಖರ್ಚು ಮಾಡಿ ಹರಿಜನರಿಗೆ ಗಿರಿಜನರಿಗೆ ಉತ್ತಮವಾದ ಮನೆಗಳನು ಕಟ್ಟಿಸಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಳ್ಳೂರು ಆನಂದರಾವ್.— (ರಾಜಾಜಿನಗರ) ಮಾನ್ಯ ಸಭಾಧ್ಯಕ್ಷರೇ, ಈಪೊತ್ತು ನಮ್ಮ ಮುಂದೆ, ಈ ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಏನು ಇಟ್ಟಿದ್ದಾರೆ ಅದಕ್ಕೆ ಒಪ್ಪಿಗೆ ಕೊಡಲಿಕ್ಕೆ ಸಾಧ್ಯವೇ ಇಲ್ಲ ಎಂದು ನಾನು ಹೇಳಬಯಸುತ್ತೇನೆ. ಕಾರಣವಾದರೂ ಇಷ್ಟೆ. ಆ ಕಡೆಯ ನಮ್ಮ ಮಿತ್ರರುಗಳು ಇವೆಲ್ಲಾ ನ್ಯಾಯಸಮ್ಮತವಾದುದು ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಹೇಳಬೇಕಾದರೆ ಸರ್ಕಾರ ಈ ಬಗ್ಗೆ $\frac{1}{3}$ ಭಾಗದಷ್ಟು ಏನು ಹಣ ಖರ್ಚು ಮಾಡಿದ್ದಾರೆ ಅಂದರೆ ಸುಮಾರು ೨೦೮ ಕೋಟಿ ರೂಪಾಯಿಗಳಷ್ಟು ಹಣ ಏನು ಖರ್ಚು ಮಾಡಿದ್ದಾರೆ ಅದಕ್ಕೆ ಈ ಸದನವನ್ನು ಒಪ್ಪಿಗೆ ಕೊಡಿ ಎಂದು ಏನು ಕೇಳುತ್ತಾ ಇದ್ದಾರೆ ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಬಯಸುತ್ತೇನೆ, ಯಾವ ಲೆಜಿಸ್ಲೇಚರ್ ಕೂಡ ಇದನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. I take it as the encroachment of the executive on the legislative powers. ಈ ಹಣವನ್ನು ನೀವು ಖರ್ಚು ಮಾಡಿದ್ದೀರೋ ಖರ್ಚು ಮಾಡಿಲ್ಲವೋ ನಮಗೆ ಹೇಗೆ ಗೊತ್ತು? ಹೇಗೆ ಖರ್ಚು ಮಾಡಿದ್ದೀರಿ, ಹೇಗೆ ವಿತರಣೆ ಮಾಡಿದ್ದೀರಿ? ಅದು ಒಂದೂ ಇಲ್ಲದೆ ಈ ಸಭೆಯ ಒಪ್ಪಿಗೆ ಇಲ್ಲದೆ ಖರ್ಚು ಮಾಡಿ ಬಿಟ್ಟು, ನೀವು ಒಪ್ಪಿಗೆ ಕೊಡಿರಿ ಎಂದು ಕೇಳಿದರೆ ಹಾಗೆ ಕೇಳುವ ಹಕ್ಕು ನಿಮಗೂ ಇಲ್ಲ, ಕೊಡುವ ಹಕ್ಕು ನಮಗೂ ಇಲ್ಲ ಎಂದು ಹೇಳುತ್ತೇನೆ. ನೀವು ಇದನ್ನು ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಹೊರಟಿದ್ದೀರಿ. ಆದುದರಿಂದ ನಾವು ಇದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತೇನೆ. ಬಹುಶ: ನಾನು ಈ ಮಾತನ್ನು ಹೇಳಿದರೆ ಆ ಕಡೆ ಇರತಕ್ಕಂಥಾ ಸದಸ್ಯರೂ ಕೂಡ ಒಪ್ಪುವುದಿಲ್ಲ ಎಂದು ನನ ಭಾವನೆ.

ಒಬ್ಬ ಸದಸ್ಯರು.— ನಮ್ಮ ಪರವಾಗಿ ಮಾತನಾಡುವುದು ಬೇಡ ನಿಮ್ಮ ಪರವಾಗಿ ಮಾತನಾಡಿ ಸಾಕು.

ಶ್ರೀ ಮಳ್ಳೂರು ಆನಂದರಾವ್.— ನಾನು ಹೆಚ್ಚು ಸಮಯ ತೆಗೆದು ಕೊಳ್ಳದೆ ಎಜುಕೇಷನ್ ಡಿಮ್ಯಾಂಡ್ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನಾಡಿ ಈ ಸದನದ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಮಾನ್ಯ ಸದಸ್ಯರು ಮಾತನಾಡುವಾಗ ಇದರಲ್ಲಿ ಎಕ್ಸ್‌ಪ್ಲೆನೇಟರಿ ನೋಟಿನಲ್ಲಿ ಕೊಟ್ಟಿರುವ ಐಟಂ ನಂಬರ್ ೩ ಅನ್ನು ಓದಿಕೊಂಡು ಮಾತನಾಡಿದರೆ ಒಳ್ಳೆಯದು. ಇದು ೨೦೮ ಕೋಟಿ ರೂಪಾಯಿ ಅಲ್ಲ ಅನ್ನುವುದು ಗೊತ್ತಾಗುತ್ತದೆ.

ಶ್ರೀ ಮಳ್ಳೂರು ಆನಂದರಾವ್.— ನಾನು ಅದರ ಬಗ್ಗೆ ಹೆಚ್ಚು ವಿವಾದಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಇಷ್ಟೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿಬಿಟ್ಟು ಆಮೇಲೆ ಇದಕ್ಕೆ ಒಪ್ಪಿಗೆ ಕೊಡಿ ಎಂದು ಕೇಳುವುದು ಸರಿಯಾದ ಮಾರ್ಗವೇ ಎಂದು ಕೇಳುತ್ತೇನೆ. ಇದಕೆ ಒಂದು ಗಾದೆ ಹೇಳಬೇಕಾದರೆ ಮದುವೆ ಮಾಡಿದ ಮೇಲೆ ಸಂಸಾರ ಮಾಡುವುದು ಸರಿಯೋ ಅಥವಾ ಸಂಸಾರ ಮಾಡಿದ ಮೇಲೆ ಮದುವೆ ಮಾಡುವುದು ಸರಿಯೋ? ಇನ್ನು ಹೆಚ್ಚು ಹೇಳುವುದಕೆ ಹೋಗುವುದಿಲ್ಲ. ನನಗೆ ಮಾತನಾಡಲು ಹೆಚ್ಚು ಕಾಲಾವಕಾಶ ಇಲ್ಲದೇ ಇರುವುದರಿಂದ ಡಿಮ್ಯಾಂಡ್ ನಂಬರ್ ೨೨ರ ಬಗ್ಗೆ ಎಜುಕೇಷನ್ ಡಿಮ್ಯಾಂಡ್ ಮೇಲೆ ಮಾತ್ರ ಮಾತನಾಡುತ್ತೇನೆ. ಇದರಲ್ಲಿ ಐಟಂ ನಂಬರ್ (೧) ರಲ್ಲಿ ಏನು ಹೇಳಿದ್ದೀರಿ ಎಂದರೆ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್ ಮೇಷ್ಟರುಗಳಿಗೆ ಸಂಬಳ ಪಾವತಿ ಮಾಡುವುದಕ್ಕೆ ಚೆಕ್ ಸಿಸ್ಟಂ ಮುಖಾಂತರ ಪಾವತಿ ಮಾಡುವುದಕ್ಕೆ ಡಿಸ್ಟ್ರಿಕ್ಟ್ ಆಫೀಸ್‌ಗಳನು ಹೆಚ್ಚು ಮಾಡಿದೆ ಎಂದು ಹೇಳಿದ್ದೀರಿ. ಅಲ್ಲದೆ ಇದಕೆ ಬೇಕಾಗುವ ಬ್ಯಾಡ್ಮಿ ಮಿಷನ್ ಅನ್ನು

ಸೆಟ್ ಒಂದಕ್ಕೆ ೫೬ ಸಾವಿರ ರೂಪಾಯಿನಂತೆ ೨೧ ಸೆಟ್ಸ್ ಕೊಂಡುಕೊಳ್ಳುವುದಕ್ಕೆ ನ್ಯೂ ಸರ್ವಿಸ್ ಮುಖಾಂತರ ೧೧.೫೬ ಲಕ್ಷ ರೂಪಾಯಿ ತೋರಿಸಿದ್ದಿರಿ. ಆದುದರಿಂದ ಇದಕ್ಕೆ ನಾನು ಒಪ್ಪಿಗೆ ಕೊಡುವುದಕೆ ಸಾಧ್ಯವೇಇಲ್ಲ? ಇವಕ್ಕೆಲ್ಲಾ ಒಪ್ಪಿಗೆ ಕೊಡುವುದಕ್ಕೆ ಹೇಗೆ ಸಾಧ್ಯ ತಾವು ಯೋಚನೆ ಮಾಡಿ. ತಾತ್ವಿಕವಾಗಿ ಇದಕ್ಕೆ ಒಪ್ಪಿಗೆ ಕೊಡಲಿಕೆ ಸಾಧ್ಯವೇ ಇಲ್ಲ.

ಹಾಗೆಯೇ ಇದರಲ್ಲಿರುವ ಐಟಂ ನಂಬರ್ (೪) ಅನ್ನು ನೋಡಿದರೆ ನಿರುದ್ಯೋಗಿಗಳಾದಂಥಾವರಿಗೆ ತಿಂಗಳು ಒಂದಕೆ ೧೫೦ ರೂಪಾಯಿ ಸ್ಟೈಫಂಡ್ ಕೊಡುವ ಏನು ಒಂದು ಯೋಜನೆ ಹಾಕಿಕೊಂಡಿದ್ದೀರಿ ಇದರಿಂದ ನಿರುದ್ಯೋಗ ಸಮಸ್ಯೆ ಖಂಡಿತಾ ಪರಿಹಾರವಾಗುವುದಿಲ್ಲ ಎಂದು ಹೇಳುತ್ತೇನೆ. ನೀವು ಇದಕ್ಕೆ ಬ್ರಾಡ್ಕಾಸ್ಟ್ ಮಿಷನ್ ಕೊಂಡು ಕೊಳ್ಳುವುದಕ್ಕೆ ಸೆಟ್ ಒಂದಕ್ಕೆ ೫೬ ಸಾವಿರ ರೂಪಾಯಿ ಏನು ಕೊಟ್ಟಿದ್ದೀರೋ ಅದನ್ನು ಹೊರಗಡೆ ವಿಚಾರ ಮಾಡಿ ನೋಡಿದರೆ ೨೬–೨೭½ಸಾವಿರ ರೂಪಾಯಿ ಮೇಲೆ ಹೆಚ್ಚಾಗಿ ಆಗುವುದಿಲ್ಲ. ಅಂಥಾದ್ದರಲ್ಲಿ ಇದನ್ನು ಒಪ್ಪಿಕೊಳ್ಳುವುದಕ್ಕೆ ಹೇಗೆ ಸಾಧ್ಯ. ಆದುದರಿಂದ ನಾನು ಹೇಳುವುದು ಇಷ್ಟೆ ಇದರ ಬಗ್ಗೆ ಅಡಿಟ್ ರಿಪೋರ್ಟ್ ತರಿಸಿ ತನಿಖೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಇದರಲ್ಲಿರುವ ಐಟಂ ನಂಬರ್ ೩ ಅನ್ನು ನೋಡಿದರೆ ಇದಕ್ಕೆ ಒಂದು ಸ್ಕೀಂಮಾಡಿ ಸಪರೇಟ್ ಡೈರಕ್ಟೋರೇಟ್ ಮಾಡಿ ನ್ಯೂಸರ್ವಿಸಸ್ ಅಂತ ಬೇಕಾದಷ್ಟು ಆಫೀಸರ್ಸ್‌ಗಳನ್ನು ಹೆಚ್ಚು ಮಾಡಿದ್ದೀರಿ. ಇದಕ್ಕೆ ೧೭, ೪೨, ೭೮೫ ರೂಪಾಯಿಗಳನ್ನು ಖರ್ಚು ಮಾಡಿ ಇದಕ್ಕೆ ಒಂದು ಹೊಸ ಡಿಪಾರ್ಟ್‌ಮೆಂಟನ್ನೇ ಮಾಡಿಬಿಟ್ಟಿದ್ದೀರಿ. ಇದರ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಮಾಡಬೇಕಾಗಿತ್ತು. ಒಬ್ಬೊಬ್ಬರು ಮಂತ್ರಿಗಳು ಬಂದಾಗ ಒಂದೊಂದು ಎಕ್ಸ್‌ಪರಿಮೆಂಟ್ ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಎಸ್. ಎಂ. ಯಾಹ್ಯಾ.—ಇದು ನಮ್ಮ ಯೋಜನೆ ಅಲ್ಲ. ಕೇಂದ್ರದ ಎಕ್ಸ್‌ಪೆರಿಮೆಂಟ್. ಅದನ್ನು ಮಾಡುತ್ತಾ ಇದ್ದೇವೆ.

ಶ್ರೀ ಮಳ್ಳೂರು ಆನಂದರಾವ್.—ಈ ಬಗ್ಗೆ ಕೇಂದ್ರದ ಸಲಹೆ ಏನುಇತ್ತೋ ಅದನ್ನು ಕೂಡ ಅಳವಡಿಸಿಕೊಂಡು ಈ ವೊಕೇಷನಲ್ ಎಜುಕೇಷನ್ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಮಾಡಬೇಕಾಗಿತ್ತು. ಹೀಗೆ ಮಾಡಿದರೆ ಖಂಡಿತ ವಿಫಲವಾಗುತ್ತದೆ. ಹಾಗೆ ಮಾಡದೆ ಇದನ್ನು ಪೋಸ್ಟ್ ಮಾರ್ಟಮ್ ಮಾಡುವುದಕ್ಕೆ ಹೊರಟಿದ್ದೀರಿ. ನಾನು ಈ ಬಗ್ಗೆ ಹೇಳುವುದೇನೆಂದರೆ ಹೇಗಾದರೂ ನೀವು ಈ ಎಜುಕೇಷನ್‌ಗೆ ೧೧೪ ಕೋಟಿ ರೂಪಾಯಿ ಏನು ಖರ್ಚು ಮಾಡುತ್ತೀರೋ ಇದಕ್ಕೆ ಇನ್ನು ೧೭ ಕೋಟಿ ಜಾಸ್ತಿ ಸೇರಿಸಿ ಆ ಎಜುಕೇಷನ್ ಡಿಮ್ಯಾಂಡ್‌ಗೆ ಇದನ್ನೂ ಸೇರಿಸಿಬಿಡಿ. ಈರೀತಿಯಾಗಿ ನೀವು ಯೋಚನೆ ಮಾಡಿ ನೋಡಿದರೆ ಇದು ಸರಿಯೋ ಅಲ್ಲವೇ ಎನ್ನುವುದು ನಿಮಗೆ ಗೊತ್ತಾಗುತ್ತದೆ. ಆದುದರಿಂದ ನಾವು ಇದಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತೇನೆ.

ಇನ್ನು ಇದರಲ್ಲಿರುವ ಐಟಂ ನಂಬರ್ (೫)ರ ಬಗ್ಗೆ ಹೇಳುವುದಾದರೆ ಮಾನ್ಯ ಹಣಕಾಸಿನ ಮಂತ್ರಿಗಳು ಇದರ ಬಗ್ಗೆ ವಿಶೇಷಗಮನ ಹರಿಸಬೇಕು ಎಂದು ಹೇಳುತ್ತೇನೆ. ಈಗ ಎಕ್ಸಾಮಿನೇಷನ್ ಬೋರ್ಡ್ ಅನ್ನುವುದು ಒಂದು ಅಟಾನಮಸ್ ಬಾಡಿ ಇದ್ದ ಹಾಗೆ. ಇದರಲಿ ಯಾವ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬಸ್‌ಗೇ ಸೇರಿದಂಥಾ ವಿದ್ಯಾರ್ಥಿಗಳು ಇದ್ದಾರೆ ಅವರಿಗೆ ಎಕ್ಸಾಮಿನೇಷನ್ ಫೀಸ್ ಮಾಫಿ ಮಾಡಿದ್ದಾರೆ. ಅವರು ಪರೀಕ್ಷೆಗೆ ಹಣ ಕಟ್ಟಬೇಕಾದ ಅಗತ್ಯ ಇಲ್ಲ. ಅಲ್ಲದೆ ಆ ಮಕ್ಕಳು ಯಾವಕ್ಲಾಸ್ ಫೀಸ್ ಸಹ ಕೊಡುವ ಹಾಗೆ ಇಲ್ಲ. ಅದನ್ನು ಮಾನ್ಯ ಮಾಡಿದೆ. ನ್ಯಾಯವಾಗಿ ಇದರ ಬಗ್ಗೆ ಬರತಕ್ಕಂಥಾ ಇನ್‌ಕಂ ಏನು ಇದೆ ಅದು ನಷ್ಟ ಆಗುವುದರಿಂದ ಸರ್ಕಾರದವರು ಈ ಹೆಚ್ಚಳ ಹಣವನ್ನು ಬೋರ್ಡ್‌ಗೆ ಕೊಡತಕ್ಕದ್ದು ಅವರ ಕರ್ತವ್ಯವಲ್ಲವೇ? ಸರ್ಕಾರದವರು ಈ ಬಗ್ಗೆ ಕೀರ್ತಿ ತೆಗೆದುಕೊಂಡ ಮೇಲೆ ಆ ಹಣವನ್ನು ವಾಪಸ್ಸು ಬೋರ್ಡ್‌ಗೆ ಕೊಡಬೇಡವೆ? ಇದರಲ್ಲಿ ಎಲ್ಲರೂ ಭಾಗಿಗಳು ಎಂದು ಹೇಳುತ್ತೇನೆ. ಆ ಹಣವನ್ನು ಸರ್ಕಾರದವರು ವಾಪಸ್ಸುಕೊಡುತ್ತಾ ಇಲ್ಲ. The position became acute in October 1977. ಮಾನ್ಯ ಹಣಕಾಸಿನ ಮಂತ್ರಿಗಳು ಮೊದಲು ವಿದ್ಯಾ ಮಂತ್ರಿಗಳು ಆಗಿದ್ದರು. ಆಗ ಅವರನ್ನು ಇದಕೆ ೨೫ ಲಕ್ಷ ರೂಪಾಯಿ ಸಾಲ ಕೊಡಿ ಎಂದು ಕೇಳಿದ್ದಾರೆ. ಇದು ಒಂದು ವಿಚಿತ್ರ ಸ್ಥಿತಿ. ಅವರಿಗೆ ಸಾಲ ಕೊಡಬೇಡಿ, ಅದಕ್ಕೆ ನಾನು ಒಪ್ಪುವುದಿಲ್ಲ. ಬೋರ್ಡಿನ ಸಿ ತಿಗತಿ ಬಗ್ಗೆ ನಮಗೆ ಗೊತ್ತಿದೆ. ಅದರ ಬಗ್ಗೆ ನಾವು ಎಜಿಟೇಷನ್ ಕೂಡ ಮಾಡಿದ್ದೇವೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿದ್ಯಾರ್ಥಿಗಳಿಗೆ ಫೀಸ್ ವಗ್ಯೆರೆ ಮಾಫಿ ನಾವು ಮಾಡಿದ್ದೇವೆ ಎಂದು ಹೇಳಿಕೊಂಡು ಕೀರ್ತಿ ತೆಗೆದುಕೊಳ್ಳುತ್ತೀರಿ ಆದರೆ ಇದರ ಕೊರತೆ ತುಂಬುವುದಕ್ಕೆ

ಏನು ಮಾಡಬೇಕು ಅನ್ನುವುದು ಬೇಡವೇ? ಈ ದುಡ್ಡನ್ನು ರೀಇಂಬರ್ಸ್ ಮಾಡುವುದು ಸರ್ಕಾರದ ಕರ್ತವ್ಯವಲ್ಲದೇ ಹಾಗೆ ಮಾಡದೇಹೋದರೆ ಈ ಸ್ಕೀಂನಲ್ಲಿ ಸರಿಯಾಗಿ ಕೆಲಸಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಇದಕೆ ನಮ್ಮ ಒಪ್ಪಿಗೆ ಬೇಕಾದರೆ ಮುಂದೆ ಎಜುಕೇಷನ್ ಡಿಮ್ಯಾಂಡ್ ಏನು ಬರುತ್ತದೆ ಆವಾಗ ಈ ದುಡ್ಡನ್ನೂ ಸೇರಿಸಿ ಆ ಬೋರ್ಡ್‌ಗೆ ರೀಇಂಬರ್ಸ್ ಮಾಡುತ್ತೇವೆ ಎಂದು ಹೇಳುವುದಾದರೆ ಇದಕೆ ನಾನು ಒಪ್ಪಿಗೆ ಕೊಡುತ್ತೇನೆ. ಇಲ್ಲದೇಹೋದರೆ ಇದಕ್ಕೆ ನಾನು ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟು ಮಾತುಗಳನ್ನಾಡಲು ನನಗೆ ಕಾಲವಕಾಶ ಕೊಟ್ಟಅಧ್ಯಕ್ಷರಿಗೆ ನನ್ನ ಧನ್ಯವಾದಗಳು.

4-30 P. M.

† SRI K. PUTTASWAMY (Chamaraj),—Now that the House is very much pressed for time, I did not like to encroach upon the time of my other friends.

Sir, I was just looking at the demand No. 86-Religious and Charitable Institutions etc. Here item No. (2) relates to Nehru Centre. It is no doubt Nehru Centre at Bombay is a Charitable trust specially to commemorate the memory of Jawaharlal Nehru. Nobody would hesitate to donate any reasonable amount for this purpose ; but the way in which it was been done is a matter which needs certain comments. Sir, the Secretary of the Centre wanted the Government to donate collections of entertainment tax of three days races. Accordingly, Government have agreed and now they have calculated the amount at Rs. 11,44,230-95. I am not referring to this amount. What prevented the government to give a donation of either Rs. 10 lakhs, 15 lakhs or Rs. 20 lakhs. Sir, directly we know what country owes to late Jawaharlal Nehru and to commemorate his memory any amount that the government can spare could have been given. But the mode of giving is not satisfactory. I think if Nehru were alive, and a nature of this donation for any other national leader, was asked, he would not have been a party to it. I am sorry the government have agreed for such a thing.

Sir. I would like to refer to one other thing. The Government have recently entered into the shipping trade. They have constituted a Shipping Corporation vide D, No. 55. Sir, the Karnataka Shipping Corporation Ltd. has now acquired two ships at a cost of Rs. 973-56 lakhs, the payment has been made by borrowing 90% of the cost of the first ship ; 100% of the cost of the second ship from the Chemical Bank of New York to be repayable at 8% interest at 13 half yearly instalments. Now they have tried to borrow this amount from the Shipping Development Fund Committee a Statutory body formed by the government of India and they wanted the government of Karnataka tocontribute to the share capital to have eligibility For that purpose they have come before us, I would like to know form the Finanace Minister, when the government took a decision to

form this Shipping Corporation if I remember aright they took a decision in the year 1973. I would like to know from the Finance Minister the working of the Shipping Corporation. I am told that it has resulted in a very heavy loss.

SRI S. M. YAHYA.—My information is otherwise.

SRI K. PUTTASWAMY.—I shall be very happy if I am told that the Corporation is doing well. But I know I have some information, I cannot give him the definite figure, it has resulted in very heavy loss. While I am on this point, I would like to point out that the Chief Secretary is the Chairman of the Shipping Corporation. Sir, can a Chief Secretary find time in the midst of his several responsibilities, to attend to the administration of this Corporation? and certain other officials are also there. I know the Chief Secretary had to go abroad more than once in connection with the purchase of ships and entering into an agreement with the sellers and also to negotiate loan with the New Yark Bank. I would like to ask the Government whether the work of running the administration of this Government is important or the administration of the shipping corporation is important. Is it not possible for you to find a substitute for the Chief Secretary ? My information is that this has been thoroughly mismanaged and it has resulted in a very heavy loss. The Minister said that it was not a fact; if that is so, I would be very happy. When we make a reference to such sensitive subjects, I would be very much obliged if the Minister readily corrects us so that would prevent several unnecessary arguments being developed. I may say that the Minister is not fully informed about this. He may require some time to get the information.

SRI S. M. YAHYA.—At the formation stage, I was also in-charge of the Board. I do not want to give off-hand information. But my information is that the formation is something highly commendable. We have purchased two ships. It is said that this is doing wonder fully well-subject to correction. I will get the information,

SRI S. R. BOMMAI.—Purchase of ships is a big deal.

SRI K. PUTTASWAMY,—Sir now I am referring to the Demand No. 50, item No. 11. This relates to the Vikrant Tyres Limited. It is stated that the Corporation has to buy up shares out of calls in arrears from the promoters quota which amounts to Rs. 38.25 lakhs. In addition, the KSIIDC has to provide a portion of the cost in over-runs. I would like to know from the Hon'ble Minister what was the original estimate of the project as originally conceived ? what is the over-run; Whether this over-run is justifiable one? Whether the KSIIDC had undertaken to share or to contribute the

